# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಏಪ್ರಿಲ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ 4 ಪ್ರಕಟಣೆ : 9-04-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ಅಶೋಕನಗರ ನಿವಾಸಿ ಶ್ರೀಮತಿ ಸರೋಜಾದೇವಿ ಮತ್ತು ಶ್ರೀ ಗಣೇಶ್ ಎಸ್.ರವರ ಸುಪುತ್ರಿ ಚಿ। ಸೌ। ಅನುಷಾ ಮತ್ತು ಚಿ। ನಿಖಿಲ್‌ರವರ ವಿವಾಹ ಸವಿನೆನಪಿಗಾಗಿ ಮತ್ತು ತಮ್ಮ ಹೆತ್ತವರಾದ ಅರೆಹೊಳೆ ಶಂಕರ್ ಶಾನುಭಾಗ್ ಮತ್ತು ಸೀತಾಲಕ್ಷ್ಮಿ ಶಾನುಭಾಗ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- ದೇಣಿಗೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಸಭಾದ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮಂಗಳೂರಿನ 'ವಿಜಯ ನಿವಾಸ' ಪೈಕಾನ ವೆಂಕಟ್ರಮಣಯ್ಯ ಮತ್ತು ಕೂಡ್ಲು ರಮಾಬಾಯಿ ಸ್ಮರಣಾರ್ಥ ಅವರ ಮಕ್ಕಳಾದ ಶ್ರೀಮತಿ ವೇದಾ ಭಟ್, ಶ್ರೀಮತಿ ಉಷಾ ಪ್ರಭಾಕರ್, ಶ್ರೀಮತಿ ವಿಜಯಾ ಭಟ್, ಶ್ರೀಮತಿ ವಸಂತಿ ರಾವ್, ಶ್ರೀಮತಿ ಸರೋಜಾದೇವಿ ಮತ್ತು ಶ್ರೀ ಪಿ. ಶ್ರೀಕಾಂತ್ ರಾವ್ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 52,500/- ದೇಣಿಗೆ ನೀಡಿದ್ದಾರೆ. ಈ ಹಿಂದೆ ರೂ. 52,500/- ದೇಣಿಗೆ ನೀಡಿದ್ದು, ಒಟ್ಟು ರೂ. 1,05,000/- ದೇಣಿಗೆ ನೀಡಿದಂತಾಗಿದೆ. ಈ ಸಂದರ್ಭದಲ್ಲಿ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.





ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದಿಂದ ತಾರೀಕು 11-03-2022ರ ಶುಕ್ರವಾರ ನಡೆದ ತ್ರಿಕಾಲ ಪೂಜೆಯ ಸುಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 20,000/- ದೇಣಿಗೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಬೆಳ್ತಂಗಡಿ ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್, ಕಾರ್ಯದರ್ಶಿ ಶ್ರೀಮತಿ ರೇಖಾ ಸುಧೀರ್, ಶ್ರೀ ಎಂ. ಎಸ್. ಅರುಣ್ ಕುಮಾರ್, ಶ್ರೀ ಧನಂಜಯ್ ರಾವ್, ಶ್ರೀ ಲಕ್ಷ್ಮೀನಾರಾಯಣ್ ರಾವ್, ಮಂಗಳೂರು ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಶ್ರೀಮತಿ ಸ್ನೇಹಾ ಶರ್ಮ ಮತ್ತು ಶ್ರೀ ಅರ್ಪಿತ್ ಶರ್ಮ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ ತಮ್ಮ ಅಜ್ಜ ಕೆಳಗಿನ ನಾವುರ ಸದಾಶಿವ ಶರ್ಮ ಸ್ಮಾರಕ ವಿದ್ಯಾರ್ಥಿವೇತನ ನಿಧಿಗೆ ರೂ. 50,000/- ಮತ್ತು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ 50,100/- ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆಯನ್ನು ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಶ್ರೀ ಅರ್ಪಿತ್ ಶರ್ಮರವರು ಶ್ರೀಮತಿ ಅನುಪಮಾ ಮತ್ತು ಶ್ರೀ ರಾಜಶೇಖರ ಶರ್ಮರವರ ಸುಪುತ್ರ ಮತ್ತು ಶ್ರೀಮತಿ ಸ್ನೇಹಲತಾ ಹಾಗೂ ಡಾ। ದಿವಾಕರ್ ರಾವ್‌ರವರ ಮೊಮ್ಮಗ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕ ಶ್ರೀ ಸಂತೋಷ್ ಯು. ಮತ್ತು ಶ್ರೀಮತಿ ರಜನಿಯವರ ಅಳಿಯ.

ಚಿತ್ರ : ಶ್ರೀ ರಘುವೀರ್ ಪೆರ್ಡೂರು



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ದಿನಾಂಕ 14-05-2022ನೇ ಶನಿವಾರ ಸಂಜೆ ಗಂಟೆ 5-00ರಿಂದ ಶ್ರೀ ಸಭಾದ ವತಿಯಿಂದ



**'ಶ್ರೀ ಶಂಕರ ಜಯಂತಿ ಆಚರಣೆ'** ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವಸದಸ್ಯರು

ಹೆಚ್ಚಿನ ಮಾಹಿತಿಗಾಗಿ ಶ್ರೀ ಅನಿಲ್ ಎನ್. ✆ : 9448815172 | ಶ್ರೀಮತಿ ಕುಸುಮ ನವೀನ್ ಕುಮಾರ್ ✆ : 9480760904

### ಕಾರ್ಯಕ್ರಮಗಳು

ಸಂಜೆ 5-00ರಿಂದ 5-30 : ಉಪಾಹಾರ
ಸಂಜೆ 5-30ರಿಂದ :
ಸಾಮೂಹಿಕ ಲಲಿತ ಸಹಸ್ರನಾಮ, ವಿಷ್ಣು ಸಹಸ್ರನಾಮ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಪಾರಾಯಣ ಮತ್ತು ಶ್ರೀ ದುರ್ಗಾನಮಸ್ಕಾರ ಪೂಜೆ ಪ್ರಾರಂಭ
ಸಂಜೆ 6-30ರಿಂದ : ಧಾರ್ಮಿಕ ಉಪನ್ಯಾಸ
ರಾತ್ರಿ 8-00ಕ್ಕೆ : ಮಹಾಪೂಜೆ, ಪ್ರಸಾದ ವಿತರಣೆ
ರಾತ್ರಿ 8-30ರಿಂದ : ಪ್ರಸಾದ ಭೋಜನ

ವಿ.ಸೂ. : ಸದಸ್ಯರು ಅರ್ಚನೆಗಾಗಿ ಪುಷ್ಪ ಹಾಗೂ ಪತ್ರೆಗಳನ್ನು ತಂದು ಭಾಗವಹಿಸಬೇಕಾಗಿ ವಿನಂತಿ.


• e-mail : jnanashakthisss@gmail.com • whatsapp : 7795116598 • Mobile : 9343361618 •


- ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಬೋಧಿಸುವ ಧರ್ಮವನ್ನು ನಾನು ಪ್ರೀತಿಸುತ್ತೇನೆ. – ಡಾ. ಬಿ. ಆರ್. ಅಂಬೇಡ್ಕರ್
- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು – ಸ್ವಾಮಿ ವಿವೇಕಾನಂದ

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್**
**ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಸ್ವಾತಿ ಪ್ರಮೋದ್ ಕ್ಯಾದಿಗೆ**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಹರ್ಷಕುಮಾರ್ ಕೇದಿಗೆ**

## • ಸನ್ಮಾನ •



ಉಡುಪಿಯಲ್ಲಿ ವಿಶೇಷ ಚೇತನ ಮಕ್ಕಳ ತರಬೇತಿ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ನಿವೃತ್ತ ವಿಶೇಷ ಶಿಕ್ಷಕಿ **ಶ್ರೀಮತಿ ಗಂಗೆ ಶ್ಯಾನುಭಾಗ್**ರವರನ್ನು ಶಾಸಕ ಶ್ರೀ ರಘುಪತಿ ಭಟ್‌ರವರು ಸನ್ಮಾನಿಸಿ ಅಭಿನಂದಿಸಿದರು.

## ವಿದ್ಯಾನಿಧಿಗೆ ದೇಣಿಗೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿರುವ 'ವಿಜಯ ನಿವಾಸ' ಪೈಕಾನ ವೆಂಕಟ್ರಮಣಯ್ಯ ಮತ್ತು ಕೂಡ್ಲು ರಮಾಬಾಯಿ ಸ್ಮಾರಕ ವಿದ್ಯಾನಿಧಿಗೆ ಅವರ ಮಕ್ಕಳು ರೂ. 26,000/- ನೀಡಿ ನಿಧಿಯನ್ನು ರೂ. 1,88,500/-ಕ್ಕೆ ಹೆಚ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಅರ್ಜುನ್ ರಾವ್, ಶ್ರೀಮತಿ ಉಷಾ ಪ್ರಭಾಕರ್ ರಾವ್, ಶ್ರೀಮತಿ ಸರೋಜಾದೇವಿ, ಶ್ರೀ ಗಣೇಶ್ ಎಸ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ಸಭಾದ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ.

ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

## ಉಡುಪಿ ಜಿಲ್ಲಾ ಕೃಷಿಕ ಸಂಘ, ಉಡುಪಿ

'ಕೃಷಿತೋ ನಾಸ್ತಿ ದುರ್ಭಿಕ್ಷಮ್' ಎಂಬ ಉಕ್ತಿಯಂತೆ ನಡೆವ

**ಶ್ರೀಮತಿ ಶರಾವತಿ ಯು. ಆರ್. ಎಲ್ಲೂರು** ಇವರಿಗೆ

### ❋ ಅಭಿನಂದನೆ ❋





ಇವರು ತಮ್ಮ ಕೃಷಿ ಭೂಮಿಯಲ್ಲಿ ನಿಷ್ಠೆ, ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಸಾವಯವ ಗೊಬ್ಬರ, ವೈಜ್ಞಾನಿಕ ಕೃಷಿ, ಸಮಗ್ರ ಕೃಷಿ ಅನುಸರಿಸುವುದರ ಮೂಲಕ ಕೃಷಿ ಲಾಭದಾಯಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ವೈವಿಧ್ಯಮಯ ಬೆಳೆಗಳನ್ನು ಮಾಡಿ, ಭೂಮಿಯನ್ನು ಹಸನುಗೊಳಿಸಿ, ಪ್ರಕೃತಿಮಾತೆಯ ಕೃಪೆಗೆ ಒಳಗಾಗಿದ್ದಾರೆ. ವಿವಿಧ ಸಂಘ ಸಂಸ್ಥೆಗಳಲ್ಲಿ, ಹಲವು ಉಪಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷಿಕ ಸಂಘದಲ್ಲಿ ಸಕ್ರಿಯರಾಗಿದ್ದಾರೆ. ಸಂಘದ ಹೋರಾಟವಿರಲಿ, ಮಾಹಿತಿ ಶಿಬಿರವಿರಲಿ, ಸಮಾವೇಶವಿರಲಿ ಹೀಗೆ ಎಲ್ಲದರಲ್ಲೂ ತಪ್ಪದೇ ಭಾಗವಹಿಸುವುದರ ಮೂಲಕ ಉತ್ತಮ ಕಾರ್ಯಕರ್ತರು ಎನಿಸಿಕೊಂಡಿದ್ದಾರೆ.

ಹೀಗೆ ಸರಳ ವ್ಯಕ್ತಿತ್ವ, ಹಸನ್ಮುಖಿ, ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆಯನ್ನು ಗುರುತಿಸಿ ಜಿಲ್ಲಾ ರೈತ ಸಮಾವೇಶ 2022ರಂದು ಗಣ್ಯರ ಸಮ್ಮುಖದಲ್ಲಿ **'ಜಿಲ್ಲಾ ಮಟ್ಟದ ಸಾಧನಾಶೀಲ ಪ್ರಶಸ್ತಿ ಪತ್ರ'**ವನ್ನು ನೀಡಿ ಗೌರವಿಸಲಾಯಿತು.

ಶ್ರೀ ದೇವರು ಇವರಿಗೆ, ಇವರ ಕುಟುಂಬಕ್ಕೆ ಆಯುರಾರೋಗ್ಯ, ಐಶ್ವರ್ಯ, ನೆಮ್ಮದಿಯನ್ನು ನೀಡಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು / ಕಾರ್ಯದರ್ಶಿ / ಸರ್ವ ಸದಸ್ಯರು, ಉಡುಪಿ ಜಿಲ್ಲಾ ಕೃಷಿಕ ಸಂಘ, ಉಡುಪಿ**

## ತಲೇಕಿ ಶ್ರೀ ಶ್ರೀನಿವಾಸ ಮತ್ತು ಶ್ರೀ ವಿಶ್ವನಾಥ ದೇವರ ಪ್ರತಿಷ್ಠಾ ಮಹೋತ್ಸವ



ತಾ. 7–2–2022ನೇ ಸೋಮವಾರ ಶ್ರೀ ಶ್ರೀ ಶ್ರೀ ಶೃಂಗೇರಿ ಪೀಠದ ಮಹಾಜಗದ್ಗುರುಗಳವರ ದಿವ್ಯಹಸ್ತದಿಂದ ಪುನಃಪ್ರತಿಷ್ಠಾಪಿಸಲ್ಪಟ್ಟ ತಲೇಕಿ ಶ್ರೀ ಶ್ರೀನಿವಾಸ ಮತ್ತು ವಿಶ್ವನಾಥ ದೇವರ ಪ್ರತಿಷ್ಠಾ ಮಹೋತ್ಸವವು ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ಭಕ್ತಿಪೂರ್ವಕವಾಗಿ ವಿಜೃಂಭಣೆಯಿಂದ ಜರಗಿತು. ಸುಪ್ರಭಾತದ ಬಳಿಕ 12 ತೆಂಗಿನಕಾಯಿ ಶ್ರೀ ಮಹಾಗಣಪತಿ ಹವನ, ನರಸಿಂಹ ಹವನ, ಶ್ರೀ ವಿಶ್ವನಾಥ ದೇವರಿಗೆ ರುದ್ರಾಭಿಷೇಕ, ನವಕಲಶಾಭಿಷೇಕ, ಮಹಾಪೂಜೆ ಮತ್ತು ಶ್ರೀನಿವಾಸ ದೇವರಿಗೆ ಪವಮಾನಾಭಿಷೇಕ, ಪಂಚ ವಿಶಂತಿ ಕಲಶಾಭಿಷೇಕ, ಮಹಾಪೂಜೆ, ನಾಗದೇವರಿಗೆ ತಂಬಿಲ ಸೇವೆ, ಸಾಯಂಕಾಲ ದುರ್ಗಾಪೂಜೆ, ರಂಗಪೂಜೆ ಹಾಗೂ ಕುಮಾರಿ ಶ್ರಾವ್ಯಳಿಂದ ಸಂಗೀತಕಛೇರಿ. ಊರವರಿಂದ ಭಜನಾಸೇವೆ ಜರಗಿತು.

ಇದರ ಪ್ರಾಯೋಜಕರಾಗಿ ಶ್ರೀ ಹರ್ಷಕುಮಾರ್ ಕೇದಿಗೆ ಹಾಗೂ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಮತ್ತು ಕುಂಭಾಟ್ ಕುಟುಂಬದ ಸದಸ್ಯರು ಸಹಕರಿಸಿದರು. ಇದು ನಮ್ಮ ಸಮಾಜದವರಿಂದಲೇ ನಡೆಸಲ್ಪಡುವ ದೇವಾಲಯವಾಗಿದೆ.

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

**ರಾಮಾ ಅಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು

**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

# ಅಪಾರ ಕೀರ್ತಿ ಗಳಿಸಿ



ಕಡಬ ಶ್ರೀ ಗಣೇಶ್ ರಾವ್ ಮತ್ತು ಶ್ರೀಮತಿ ಅನುಪಮಾರವರ ಸುಪುತ್ರ **ಕೆ. ಆಗ್ನೇಶ್ ರಾವ್** ಈ ಬಾರಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ C.G.P.A. 9.51 ಗ್ರೇಡ್ ಗಳಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಗಳಿಸಿದ್ದಾನೆ.

***



**ಕುಮಾರಿ ಸಾಹಿತ್ಯ ಆರ್. ಭಾಗವತ್** ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22ನೇ ಸಾಲಿನ ಭರತನಾಟ್ಯ ಸೀನಿಯರ್ ಪರೀಕ್ಷೆಯಲ್ಲಿ ಶೇಕಡಾ 90ರಷ್ಟು ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಬೆಂಗಳೂರಿನ ಖ್ಯಾತ ಗುರು ಪೂರ್ಣಿಮಾ ಗುರುರಾಜ್ ಅವರ ಹಿರಿಯ ಶಿಷ್ಯೆಯಾದ ಕುಮಾರಿ ಸ್ವಾತಿ ಕೃಷ್ಣಕುಮಾರ್ ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ ಶ್ರೀ ರಮೇಶ್ ಭಾಗವತ್ ಮತ್ತು ಶ್ರೀಮತಿ ವಿದ್ಯಾ ದಂಪತಿಗಳ ಸುಪುತ್ರಿ.

***



**ಕುಮಾರಿ ಸಮನ್ವಿತಾ ಭಟ್** ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ 2021–22ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತದ ಸೀನಿಯರ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಇವಳು ಕದ್ರಿ ನೃತ್ಯ ವಿದ್ಯಾನಿಲಯದ ಗುರುಗಳಾದ ವಿದ್ವಾನ್ ಯು. ಕೆ. ಪ್ರವೀಣ್ ಮತ್ತು ಉಷಾ ಪ್ರವೀಣ್ ಇವರ ಶಿಷ್ಯೆ ಹಾಗೂ ಶ್ರೀ ಗಣೇಶ್ ಭಟ್ ಹೆಚ್. ಮತ್ತು ಶ್ರೀಲತಾ ಜಿ. ಭಟ್ ಇವರ ಪುತ್ರಿ.

***



ಶ್ರೀ ರಾಮಕೃಷ್ಣ ಉಬರಳೆ ಮತ್ತು ಶ್ರೀಮತಿ ಅಶ್ವಿನಿಯವರ ಸುಪುತ್ರಿ **ಕು| ಭಾಗ್ಯಶ್ರೀ** ಈ ಬಾರಿಯ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಶೇಕಡಾ 91.25 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.



**ಕುಮಾರಿ ಸಂಜನಾ ಜೆ.** ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22ನೇ ಸಾಲಿನ ಭರತನಾಟ್ಯ ಸೀನಿಯರ್ ಪರೀಕ್ಷೆಯಲ್ಲಿ ಶೇಕಡಾ 87ರಷ್ಟು ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಬೆಂಗಳೂರಿನ ಖ್ಯಾತ ಗುರು ಸತ್ಯನಾರಾಯಣ್ ರಾಜು ಅವರ ಹಿರಿಯ ಶಿಷ್ಯರಾದ ಮಧುಚಂದ್ರ ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ತೂರಿನ ತಾಳೆಪ್ಪಾಡಿ ಶ್ರೀ ಜಗದೀಶ್ ರಾವ್ ಮತ್ತು ಶ್ರೀಮತಿ ಸುನಿತಾ ಜಗದೀಶ್ ದಂಪತಿಗಳ ಸುಪುತ್ರಿ.

***



**ಕುಮಾರಿ ಅದಿತಿ ವಿ. ರಾವ್** ಇವರು ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ 2021–22ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯಲ್ಲಿ ಶೇಕಡಾ 83ರಷ್ಟು ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಮಂಗಳೂರಿನ ಕದ್ರಿಯಲ್ಲಿರುವ ಯು. ಎಸ್. ವಿವೇಕ್ ರಾವ್ ಮತ್ತು ಕಲಾನಿಧಿ ದಂಪತಿಗಳ ಸುಪುತ್ರಿ.

***



**ಕುಮಾರಿ ಕೆ. ಅಂಕಿತಾ ರಾವ್** ಇವರು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸಿದ 2021–22ನೇ ಸಾಲಿನ ಕರ್ನಾಟಕ ಶಾಸ್ತ್ರೀಯ ಸಂಗೀತದ ಜೂನಿಯರ್ ಪರೀಕ್ಷೆಯಲ್ಲಿ ಶೇಕಡಾ 83.5 ಅಂಕ ಗಳಿಸಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈಕೆ ಬೆಂಗಳೂರಿನ ಖ್ಯಾತ ಗುರು ಶ್ರೀಮತಿ ರಮ್ಯಾ ಸುಧೀರ್ ಅವರ ಶಿಷ್ಯೆ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಕಟೀಲಿನ ಅವಿನಾಶ್ ರಾವ್ ಮತ್ತು ಅನಿತಾ ದಂಪತಿಗಳ ಸುಪುತ್ರಿ ಹಾಗೂ ಕಟೀಲಿನ ಶ್ರೀ ಅನಂತರಾಜ ರಾವ್ ಅವರ ಮೊಮ್ಮಗಳು.

***





ಕಡಬದ ಪುತ್ರಬೈಲು ಶ್ರೀ ಸೀತಾರಾಮ ರಾವ್ ಹಾಗೂ ಶ್ರೀಮತಿ ಲಲಿತ ರಾವ್‌ರವರ ಮಗ ಶ್ರೀ ಪ್ರಸನ್ನ ಕುಮಾರ್ ಹಾಗೂ ಶ್ರೀಮತಿ ಶ್ರೀಲತಾ ಅದ್ಯಪಾಡಿ ಇವರ ಇಬ್ಬರು ಮಕ್ಕಳು ಪ್ರಣಮ್ಯ ಹಾಗೂ ಸ್ನೇಹ ಭರತನಾಟ್ಯ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. **ಕು| ಪ್ರಣಮ್ಯ ರಾವ್** – 92.83 % (Senior) **ಕು| ಸ್ನೇಹ ರಾವ್** – 96.25 % (Junior) ಅಂಕಗಳಿಸಿದ್ದಾರೆ.



**ವಂದನಾರಾಣಿ,** ಇವರು ಭರತನಾಟ್ಯ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಭರತಾಂಜಲಿಯ ಹಿರಿಯ ಶಿಷ್ಯೆಯರಲ್ಲಿ ಒಬ್ಬಳಾದ ವಂದನಾರಾಣಿ, ಇವರು ಕೆ.ಎಸ್.ಇ.ಇ.ಬಿ. ನಡೆಸಿದ ವಿದ್ವತ್ ಅಂತಿಮ ಪರೀಕ್ಷೆಗಳನ್ನು ಪೂರ್ಣಗೊಳಿಸಿ, ದಕ್ಷಿಣ ಕನ್ನಡದಲ್ಲಿ ಟಾಪರ್ ಆಗಿ ಹೊರಹೊಮ್ಮಿದ್ದಾರೆ ಎಂದು ಘೋಷಿಸಲು ನಾವು ಹೆಮ್ಮೆಪಡುತ್ತೇವೆ. ಆಕೆಯ ಭರತನಾಟ್ಯದ ಪಯಣದಲ್ಲಿ ಹದಿನಾಲ್ಕು ವರ್ಷಗಳ ಕಾಲ ನಿರಂತರ ಪರಿಶ್ರಮ, ಕೊನೆಯಿಲ್ಲದ ಉತ್ಸಾಹ ಮತ್ತು ಸಾಟಿಯಿಲ್ಲದ ಅಭ್ಯಾಸಗಳು ಈ ಗಮನಾರ್ಹ ಸಾಧನೆಯನ್ನು ಸಾಧ್ಯವಾಗಿಸಿದೆ.

ವಂದನಾರಾಣಿ ಶ್ರೀ ಕೇದಿಗೆ ವಸಂತ ರಾವ್ ಮತ್ತು ಶ್ರೀಮತಿ ರೂಪಾರಾಣಿಯವರ ಪುತ್ರಿ. ಗುರು ಶ್ರೀಮತಿ ಪ್ರತಿಮಾ ಶ್ರೀಧರ್ ಮತ್ತು ಗುರು ಶ್ರೀ ಶ್ರೀಧರ್ ಹೊಳ್ಳ, ಭರತಾಂಜಲಿ ಮಂಗಳೂರು ಇವರ ಶಿಷ್ಯೆ. ಇವರು 2021ರಲ್ಲಿ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ 87% (ಡಿಸ್ಟಿಂಕ್ಷನ್) ಗಳಿಸಿದ್ದಾರೆ, ಇವರು ಭರತಾಂಜಲಿಯ ಪ್ರಮುಖ ನೃತ್ಯಗಾರರಲ್ಲಿ ಒಬ್ಬರು ಮತ್ತು ಚಿದಂಬರದಲ್ಲಿ ನಾಟ್ಯಾಂಜಲಿ ಉತ್ಸವ, ಮೈಸೂರು ದಸರಾ, ಹಂಪಿ ಉತ್ಸವ, ಆಳ್ವಾಸ್ ನುಡಿಸಿರಿ ಮುಂತಾದ ಪ್ರತಿಷ್ಠಿತ ಉತ್ಸವಗಳಲ್ಲಿ ತಮ್ಮ ಗುರುಗಳೊಂದಿಗೆ ಪ್ರದರ್ಶನ ನೀಡಿದ್ದಾರೆ.

ಕರ್ನಾಟಕ ಸಂಗೀತದಲ್ಲಿ ಹಿರಿಯ ಶ್ರೇಣಿಯನ್ನು ಪೂರ್ಣಗೊಳಿಸಿದ ಇವರು, ಗುರು ಶ್ರೀಮತಿ ಸತ್ಯವತಿ ಮುಡಂಬಡಿತ್ತಾಯ, ಮಂಗಳೂರು ಇವರಲ್ಲಿ ಒಂದು ದಶಕದ ತರಬೇತಿಯನ್ನು ಮತ್ತು ಗುರು ಶ್ರೀ ಮಧೂರು ಬಾಲಸುಬ್ರಹ್ಮಣ್ಯ, ಉಡುಪಿ ಇವರಲ್ಲಿ ಸಂಗೀತ ತರಬೇತಿಯನ್ನು ಪಡೆದಿದ್ದಾರೆ. ವಂದನಾರಾಣಿ ಅನೇಕ ಗಮನಾರ್ಹವಾದ ನಿರೂಪಣೆಗಳನ್ನು ಹೊಂದಿ ಇವರು ಭರತಾಂಜಲಿಯ ಕೆಲವು ಉತ್ಸವಗಳು ಮತ್ತು ಪ್ರದರ್ಶನಗಳಿಗೆ ಹಿನ್ನಲೆ ಗಾಯಕಿಯಾಗಿ ಹಾಡುಗಾರಿಕೆ ಮಾಡಿದ್ದಾರೆ. ಇವರು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ (ಆಟೊನೊಮಸ್) ಶುದ್ಧ ವಿಜ್ಞಾನದಲ್ಲಿ ಪದವಿಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ಪ್ರಸ್ತುತ ತಮಿಳುನಾಡಿನ ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಭರತನಾಟ್ಯದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮಾಡುತ್ತಿದ್ದಾರೆ.

Prop.: *Kishore Kumar Kedige*
Ph. : 2231524
M. : 9880726325
**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಶ್ರೀ ಸುಬ್ರಾಯ ಬಿ. ಎನ್. ಮತ್ತು ಶ್ರೀಮತಿ ಜಯಂತಿಯವರ ಪುತ್ರಿ **ಚಿ| ಸೌ| ಸಹನಾ** ಹಾಗೂ ಶ್ರೀ ಸುಬ್ರಹ್ಮಣ್ಯ ಎನ್. ಕೆ. ಮತ್ತು ಶ್ರೀಮತಿ ಸುವರ್ಣ ಕೆ. ಎಸ್.ರವರ ಪುತ್ರ **ಚಿ| ಸುಕುಮಾರ್** ಇವರ ವಿವಾಹವು ತಾರೀಕು 27–3–2022ನೇ ರವಿವಾರ 'ಸರ್ವಸಿದ್ಧಿಕುಮಾರ ಭವನ', ಹಳುಹಳ್ಳಿಯಲ್ಲಿ ನಡೆಯಿತು.

## • ಚಂಡಿಕಾ ಯಾಗ •



ಕ್ಕೊಕುಡೆ ಪಂಜದಲ್ಲಿರುವ ಶ್ಯಾನುಭಾಗರ ಮನೆಯಲ್ಲಿ ಕುಟುಂಬಸ್ಥರು ಹಾಗೂ ಶ್ಯಾನುಭಾಗರ ಮಕ್ಕಳ ಸಹಕಾರದಿಂದ ದಿನಾಂಕ 14–3–2022ನೇ ಸೋಮವಾರದಂದು ಚಂಡಿಕಾಯಾಗ ಹಾಗೂ 14, 15, 16ರಂದು ರಾತ್ರಿ ಶ್ರೀ ದುರ್ಗಾ ಪೂಜಾ, ದೈವ, ನಾಗಾರಾಧನ ಪೂಜಾ ವಿಧಿಗಳು ಸಾಂಗವಾಗಿ ನಡೆದವು. ಕೊನೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳವರಿಂದ ಆಶೀರ್ವಚನ ಕಾರ್ಯಕ್ರಮ ನಡೆದು ಎಲ್ಲಾ ಕಾರ್ಯಕ್ರಮಗಳು ಮುಕ್ತಾಯವಾಯಿತು.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿಯ ವಿವಿಧ ಕಾರ್ಯಕ್ರಮಗಳು



ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾವು ಈ ವರ್ಷ ತನ್ನ ರಜತ ಮಹೋತ್ಸವವನ್ನು ಆಚರಿಸುತ್ತಿದ್ದು, ರಜತ ಮಹೋತ್ಸವದ ಅಂಗವಾಗಿ ನಮ್ಮ ಶ್ರೀ ಸುಬ್ರಹ್ಮಣ್ಯ ಸಭಾಭವನ, ಸುಬ್ರಹ್ಮಣ್ಯನಗರ, ಲಾಯಿಲ ಇದರ ನವೀಕರಣವನ್ನು ಮಾಡುತ್ತಿದ್ದು, 2022 ಜನವರಿ ಒಂದರಂದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸ್ಥಾನಿಕ ಸಂಘಗಳಿಂದ ತಲಾ ಒಂದು ಭಜನಾ ಸಂಘವನ್ನು ಆಹ್ವಾನಿಸಿ, ಬೆಳ್ತಂಗಡಿ ತಾಲೂಕಿನ ವಿಪ್ರ ಸಂಘಟನೆಗಳ ಭಜನಾ ಭಜನಾ ತಂಡಗಳನ್ನು ಒಳಗೊಂಡಂತೆ ವಿಪ್ರ ಭಜನಾ ಸಾಮ್ರಾಟ್ ನಡೆಸಲಾಗಿದೆ. ಇದು ಅತ್ಯಂತ ಯಶಸ್ವಿಯಾಗಿ ನಡೆದಿದ್ದು 22 ತಂಡಗಳು ಭಾಗವಹಿಸಿವೆ. ನಮ್ಮ ತಾಲೂಕಿನ ಇತರ ಬ್ರಾಹ್ಮಣ ಸಂಘಟನೆಗಳ ಅಭಿಪ್ರಾಯದಂತೆ ಬೆಳ್ತಂಗಡಿ ತಾಲೂಕಿನಲ್ಲಿ ಇಂಥ ಕಾರ್ಯಕ್ರಮಗಳನ್ನು ನಡೆಸಲು ಪ್ರಸ್ತುತ ಸ್ಥಾನಿಕ ಬ್ರಾಹ್ಮಣ ಸಂಘಟನೆಗೆ ಮಾತ್ರ ಸಾಧ್ಯ. ಬೇರೆ ಯಾವ ಸಂಘಟನೆಗಳು ಕೂಡ ಅಷ್ಟರಮಟ್ಟಿಗೆ ಬೆಳೆದು ನಿಂತಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಇದೀಗ ಎರಡನೇ ಕಾರ್ಯಕ್ರಮವಾಗಿ ದಿನಾಂಕ 11–3–2022ನೇ ಶುಕ್ರವಾರದಂದು ನಮ್ಮ ಸಭಾದ ವತಿಯಿಂದ ಲೋಕಕಲ್ಯಾಣಾರ್ಥವಾಗಿ ಅತ್ಯಂತ ಅದ್ದೂರಿಯಾಗಿ ತ್ರಿಕಾಲ ಪೂಜೆಯನ್ನು ಸಭಾಭವನದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ನಮ್ಮ ಸಮಾಜದ ಆಡಳಿತವಿರುವ ಬೆಳ್ತಂಗಡಿ ತಾಲೂಕಿನ ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನ, ಕೊಕ್ರಾಡಿಯ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಪುತ್ತೂರು ತಾಲೂಕಿನ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ, ರಾಮಕುಂಜದ ಬದೆಂಜ ಸುಬ್ರಹ್ಮಣ್ಯ ದೇವಸ್ಥಾನ, ಕಂಡುಬಂದ ಶ್ರೀ ಜಲದುರ್ಗಾ ದೇವಸ್ಥಾನ, ಸುಳ್ಯ ತಾಲೂಕಿನ ಬಳ್ಪ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನಗಳಿಗೆ ತಲಾ 80 ಲೀ ದೀಪದ ಎಣ್ಣೆ ಹಾಗೂ ತಲಾ ಒಂದು ಕ್ವಿಂಟಾಲ್ ನೈವೇದ್ಯದ ಅಕ್ಕಿಯನ್ನು ವಿತರಿಸಲಾಯಿತು. ಅಲ್ಲದೆ ಶ್ರೀ ಸುಬ್ರಹ್ಮಣ್ಯ ಸಭಾದಿಂದ ನಡೆಸಲ್ಪಡುವ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿಗೃಹಕ್ಕೆ ರೂ. 20,000/– ದೇಣಿಗೆಯನ್ನು ನೀಡಲಾಯಿತು.

ನಮ್ಮ ಸಭಾದ ವಲಯ ಸಮಿತಿಗಳ ಸದಸ್ಯರು ಲಲಿತಾ ಸಹಸ್ರನಾಮ ಪಠಣ, ಕುಂಕುಮಾರ್ಚನೆ, ಪುಷ್ಪಾಂಜಲಿ ಮತ್ತು ಭಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀ ಅಜೇಯ ಹೆಬ್ಬಾರರ ಪೌರೋಹಿತ್ಯದಲ್ಲಿ ನಡೆದ ಪೂಜೆಯಲ್ಲಿ ಕರ್ತೃಗಳಾಗಿ ಸಭಾದ ಅಧ್ಯಕ್ಷರಾದ ಪಿ. ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಪದ್ಮಾವತಿ ದಂಪತಿಗಳು ಭಾಗವಹಿಸಿದರು. ಸುಮಾರು 500ಕ್ಕಿಂತಲೂ ಹೆಚ್ಚು ಸದಸ್ಯರು ಭಾಗವಹಿಸಿ ಶ್ರೀದೇವಿಯ ಪ್ರಸಾದವನ್ನು ಸ್ವೀಕರಿಸಿ ಸಂತುಷ್ಟರಾದರು.



**ಶಾಂಕರತತ್ವ ಪ್ರಸಾರ ಅಭಿಯಾನ** ಹಾಗೂ
**ಶ್ರೀ ಸುಬ್ರಹ್ಮಣ್ಯ ಸಭಾ** ಮತ್ತು
**ವಿವಿಧ ಸಂಘ–ಸಂಸ್ಥೆಗಳ** ಸಹಯೋಗದೊಂದಿಗೆ

## ದಕ್ಷಿಣ ಕನ್ನಡ ಜಿಲ್ಲಾ ಶಂಕರ ಜಯಂತಿ

**ಸುಬ್ರಹ್ಮಣ್ಯ ಸಭಾಸದನ, ಜೈಲ್‌ರಸ್ತೆ, ಮಂಗಳೂರಲ್ಲಿ**
ದಿನಾಂಕ **15–05–2022**ನೇ ರವಿವಾರ
ಬೆಳಗ್ಗೆ ಗಂಟೆ **7–30**ರಿಂದ ಸಂಜೆ **5–00**ರ ವರೆಗೆ ನಡೆಯಲಿದೆ.

**ಕಾರ್ಯಕ್ರಮಗಳು**

| | |
|---|---|
| ಬೆಳಗ್ಗೆ ಗಂಟೆ 9-00ರಿಂದ 11-30 : | **ಧಾರ್ಮಿಕ ಕಾರ್ಯಕ್ರಮಗಳು ಮತ್ತು ವಿವಿಧ ಪಾರಾಯಣಗಳು** |
| ಪೂರ್ವಾಹ್ನ ಗಂಟೆ 11-30ರಿಂದ 12-00 : | **ಧಾರ್ಮಿಕ ಉಪನ್ಯಾಸ** |
| ಮಧ್ಯಾಹ್ನ ಗಂಟೆ 12-00ರಿಂದ 12-45 : | **ಭಜನೆ, ಮಹಾಮಂಗಳಾರತಿ** |
| ಮಧ್ಯಾಹ್ನ ಗಂಟೆ 2-00ರಿಂದ : | **ಸಾಂಸ್ಕೃತಿಕ ಕಾರ್ಯಕ್ರಮಗಳು** |

ಶ್ರದ್ಧಾಭಕ್ತಿಗಳಿಂದ ಭಾಗವಹಿಸಿ, ಶ್ರೀ ಗುರುಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.
ವಿ. ಸೂ. : ಉಪಾಹಾರ, ಪಾನೀಯ, ಭೋಜನ ವ್ಯವಸ್ಥೆ ಇರುತ್ತದೆ.



## ಶ್ರೀಮತಿ ಅರುಣಾ ಶಿವರಾಮ್ ರಾವ್

ಇವರಿಗೆ

## ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬಂಟ್ವಾಳ ವಲಯ (ರಿ.), ವಿಟ್ಲ ಇದರ ಸಕ್ರಿಯ ಸದಸ್ಯರಾಗಿ ಮತ್ತು ಭಜನಾ ತಂಡದ ನಿರ್ದೇಶಕರಾಗಿ ತನ್ನನ್ನು ತಾನು ತೊಡಗಿಸಿ ಕೊಂಡಿದ್ದು, ರಾಜ್ಯಮಟ್ಟದ ಅಂಗನವಾಡಿಯ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಆದರ್ಶಮಯ ನಿಮ್ಮ ಜೀವನ ಎಲ್ಲರಿಗೂ ಸ್ಫೂರ್ತಿಯನ್ನು ನೀಡಲಿ ಎಂದು ನಮ್ಮ ಆಶಯ.

ಆದಿಗುರು ಶ್ರೀ ಶಂಕರಾಚಾರ್ಯರ ಕೃಪೆ ಮತ್ತು ಶೃಂಗೇರಿ ಶಾರದಾಂಬೆಯು ನಿಮಗೆ ಆರೋಗ್ಯ, ಐಶ್ವರ್ಯವನ್ನು ಕೊಟ್ಟು ಕಾಪಾಡಲಿ ಎಂದು ಆಶಿಸುತ್ತೇವೆ.

**PRAVEEN KUMAR ADYAPADY**
**NOTARY & ADVOCATE**
**MANGALORE OFFICE**
JANVI PLAZA, IInd FLOOR
BUNTS HOSTEL, MANGALORE
**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

**PREETHIKA AUTOMOBILES**
2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
**Minda Switches, M. K. Products, Swiss Auto Products, Power Coils**

## ಆತ್ಮೀಯ ಸಮಾಜ ಬಾಂಧವರಲ್ಲಿ ಕಳಕಳಿಯ ವಿನಂತಿ

*'ಸ್ಥಾನಿಕ ಸಾಹಿತಿ ಮಾಹಿತಿ ಸಿಂಧು' ಪುಸ್ತಕಕ್ಕಾಗಿ ನಮ್ಮ ಸಮಾಜದ ಸಾಹಿತಿಗಳ ಮಾಹಿತಿ ನೀಡಿ ನಮ್ಮ ಸಮಾಜದ ಸಾಹಿತಿಗಳ ಪರಿಚಯಾತ್ಮಕ ಪುಸ್ತಕವನ್ನು ನನ್ನ ಸಂಶೋಧನೆಯ ಭಾಗವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಲು ಬಯಸಿದ್ದು, ಈ ನಿಟ್ಟಿನಲ್ಲಿ ನಮ್ಮ ಸಮಾಜದ ಸಾಹಿತಿಗಳು ತಮ್ಮ ಪರಿಚಯವನ್ನು ಈ ಕೆಳಗೆ ನೀಡಿರುವ ನಮೂನೆಯಲ್ಲಿ ತಮ್ಮ ಪಾಸ್‌ಪೋರ್ಟ್ ಸೈಜ್ ಭಾವಚಿತ್ರದೊಂದಿಗೆ ನೀಡಬೇಕಾಗಿ ವಿನಂತಿ. ಅಂತೆಯೇ ನಿಮ್ಮ ಕುಟುಂಬ ಮತ್ತು ಬಂಧುವರ್ಗದಲ್ಲಿರುವ ಸಾಹಿತಿಗಳಿಗೂ ಈ ಮಾಹಿತಿ ನೀಡಿ, ಈಗಾಗಲೇ ನಮ್ಮನ್ನಗಲಿರುವ ನಮ್ಮ ಸಮಾಜದ ಹಿರಿಯ ಸಾಹಿತಿಗಳ ಮಾಹಿತಿಯನ್ನು ಕಲೆಹಾಕಿ ಕೊಟ್ಟು ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸಮಾಜ ಬಾಂಧವರಲ್ಲಿ ಪ್ರಾರ್ಥನೆ.*

**ನೀಡಬೇಕಾದ ವಿವರ**

**ಹೆಸರು, ಹುಟ್ಟಿದ ದಿನಾಂಕ, ಊರು, ವಿಳಾಸ, ದೂರವಾಣಿ / ಜಂಗಮವಾಣಿ ಸಂಖ್ಯೆ, ವಿದ್ಯಾರ್ಹತೆ, ಉದ್ಯೋಗ, ಕ್ಷೇತ್ರಪರಿಣತಿ, ಸಾಂಸ್ಕೃತಿಕ ಹಿನ್ನಲೆ, ಕೃತಿ / ಕಾವ್ಯಗಳು / ಸಂಪಾದಿತ / ಅನುವಾದಿತ (ಪ್ರಕಟಗೊಂಡ ವರ್ಷದೊಂದಿಗೆ) ಪ್ರಶಸ್ತಿ / ಗೌರವ / ಮನ್ನಣೆಗಳು, ಇತರೆ**

ಈ ಎಲ್ಲಾ ವಿವರಗಳನ್ನು ತಾವು ನನ್ನ ವಿಳಾಸ :
**ಅಪೂರ್ವ ರಾವ್, ಗ್ರೌಂಡ್ ಫ್ಲೋರ್, ನಂ. 62, ಚಿನ್ಮಯಿ, ಶ್ರೀರಂಗನಗರ 1ನೇ ಅಡ್ಡರಸ್ತೆ, ಬೆಂಗಳೂರು - 560 085**ಕ್ಕೆ ಅಂಚೆ ಮೂಲಕ ಕಳುಹಿಸಬಹುದು.
ಅಥವಾ ನಿಮ್ಮ ವಿವರಗಳ ವರ್ಡ್ ಫೈಲ್ / ಪಿಡಿಎಫ್ ಅನ್ನು (ಭಾವಚಿತ್ರದೊಂದಿಗೆ) ನನ್ನ ಮಿಂಚಂಚೆ : **rao.apoorva258@gmail.com**ಗೆ ಅಥವಾ ನನ್ನ ವಾಟ್ಸಾಪ್ ಸಂಖ್ಯೆ : **9483399393**ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

**ಕೊನೆಯ ದಿನಾಂಕ : 30-04-2022**

ನಿಮ್ಮ ಮಾಹಿತಿಯ ನಿರೀಕ್ಷೆಯಲ್ಲಿ

## ಶ್ರೀ ಪ್ರಭಾಕರ ರಾವ್, ನಾರಾವಿ – ವಿರಚಿತ 'ರವಿಭಕ್ತಿಸಾರ' ಕೃತಿಯ ಬಿಡುಗಡೆ ಸಮಾರಂಭ

ದಿನಾಂಕ 20–2–2022ರಂದು ನಾರಾವಿಯ ಶ್ರೀ ಸೂರ್ಯನಾರಾಯಣ ದೇವಸ್ಥಾನದ ವಾರ್ಷಿಕ ಜಾತ್ರೆಯ ಶುಭ ಸಂದರ್ಭದಲ್ಲಿ ಖ್ಯಾತ ಜ್ಯೋತಿಷಿಗಳೂ, ಕೃಷಿಕರೂ, ನಾಟಿವೈದ್ಯರೂ ಆಗಿ ತನ್ನ ಜೀವನದುದ್ದಕ್ಕೂ ಜನಸೇವೆಗೈದ ಕೀರ್ತಿಶೇಷ ಶ್ರೀ ಪ್ರಭಾಕರ ರಾವ್, ನಾರಾವಿ ಇವರು ನಾರಾವಿ ಶ್ರೀ ಸೂರ್ಯನಾರಾಯಣ ದೇವರ ಬಗ್ಗೆ ಭಾಮಿನೀ ಷಟ್ಪದಿಯಲ್ಲಿ ಭಾವಾರ್ಥ ಸಹಿತ ಬರೆದ 108 ಶ್ಲೋಕಗಳ ಸ್ತುತಿಗೀತೆಗಳ ಬಿಡುಗಡೆ ಸಮಾರಂಭವು ಜರುಗಿತು.

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ


ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಕದ್ರಿಯ ಮಂಜುನಾಥ ಕಾಲೋನಿ 'ಈಶವಾಸ್ಯಂ' ಮನೆಯಲ್ಲಿ ವಾಸ್ತವವಾಗಿರುವ ಪ್ರೊಫೆಸರ್ ಕಟೀಲು ರಾಮ ಉಪಾಧ್ಯಾಯರ ಧರ್ಮಪತ್ನಿ **ಶ್ರೀಮತಿ ಸುಶೀಲ** (80) ಇವರು ತಾ. 29–3–2022ನೇ ಮಂಗಳವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

***



**ದಿ| ತೆಂಕಿಲ ರಾಮಕೃಷ್ಣಯ್ಯ** ತಾ. 2–3–2022ರಂದು ನಮ್ಮನ್ನೆಲ್ಲ ಅಗಲಿದ್ದಾರೆ ಎನ್ನುವುದು ಬೇಸರದ ವಿಷಯ. ಎಲ್ಲರಂತೇ... ಇವರೂ ಒಬ್ಬ ಸಾಧಾರಣ ವ್ಯಕ್ತಿ ಅಂದುಕೊಳ್ಳಬಹುದಾದರೂ ಇವರ ಬಗ್ಗೆ ತಿಳಿದುಕೊಳ್ಳಲೇಬೇಕಾದಂತಹ ಗೌರವಾನ್ವಿತ ವ್ಯಕ್ತಿ...

ತೆಂಕಿಲ ಕುಟುಂಬದ ತುಂಬು ಸಂಸಾರದ ಕಡು ಬಡತನದ ಬೇಸಗೆಯನ್ನೇ ಉಂಡ ಬಾಲ್ಯ ಜೀವನ ಇವರದು. ಅಷ್ಟರಲ್ಲಿ ಇವರು ಮಧ್ಯಮ. ಅಣ್ಣ, ಅಕ್ಕ, ತಮ್ಮ, ತಂಗಿಯರ ಪ್ರೀತಿಯ ಅಣ್ಣಯ್ಯ ಇವರು... ಸ್ವಾಭಿಮಾನಕ್ಕೆ ಇನ್ನೊಂದು ಹೆಸರೇ ಅಣ್ಣಯ್ಯ ರಂಗಭೂಮಿಯ ಅನರ್ಘ್ಯ ರತ್ನ. ತೆಂಕಿಲ ಮನೆತನಕ್ಕೊಬ್ಬ ಕಲಾತಿಲಕ ಟಿ. ರಾಮಕೃಷ್ಣಯ್ಯ. ಎಳೆ ವಯಸ್ಸಿನಿಂದಲೇ ಚುರುಕಿನ ಹುಡುಗ, ಸಂಗೀತ, ಕಲೆ ಇವರ ಮನೆಯ ಭಾಗ್ಯ ದೇವತೆ ಎಂದೇ ಹೇಳಬಹುದು. ಅಣ್ಣ ಅಕ್ಕಂದಿರ ಗರಡಿಯಲ್ಲಿ ಅಣ್ಣಯ್ಯ ಸಂಗೀತಾಭ್ಯಾಸ ಮಾಡುತ್ತಿದ್ದರಂತೆ.. ರಾಜ್ಯ ಕಂಡಂತಹ ಶ್ರೇಷ್ಠ ರಂಗಭೂಮಿ ತಂಡ ಗುಬ್ಬಿ ವೀರಣ್ಣ ನಾಟಕ ಕಂಪೆನಿಗೆ ದಿನಗೂಲಿಗೆ ಸೇರಿದ ಇವರು ಅಲ್ಲಿಯೇ ರಂಗಾಭ್ಯಾಸವನ್ನೂ ಮಾಡುತ್ತ ಹೆಚ್ಚಿನ ಸಂಗೀತವನ್ನು ಕಲಿತರು. ಕೊಳಲುವಾದನವನ್ನು ನಾಟಕಕ್ಕೆ ತರುವಲ್ಲಿ ಯಶಸ್ವಿಯಾದರು ಮತ್ತು ವೀರಣ್ಣ ಅವರಿಗೆ ಅತ್ಯಂತ ಪ್ರೀತಿಯ ವ್ಯಕ್ತಿ ಎನಿಸಿಕೊಂಡರು. ಮುಂದೆ ಸಂಗೀತ ದಿಗ್ಗಜರಾದಂತಹ ಕಾಳಿಂಗ ನಾವುಡರ ಸ್ನೇಹಾಚಾರ ರಾಮಕೃಷ್ಣಯ್ಯರ ಜೀವನದಲ್ಲಿ ಹೊಸ ಬದಲಾವಣೆ ಮಾಡಿತು. ಚಲನಚಿತ್ರಗಳಲ್ಲಿ ಹಿನ್ನಲೆ ಸಂಗೀತಕ್ಕೆ ಕೊಳಲುವಾದನವನ್ನು ಸಾಥ್ ನೀಡಲು ಮದರಾಸನ್ನೂ ಸೇರಿದರು. ಅನೇಕ ವರ್ಷ ಸಂಗೀತ ಸೇವೆ ಮಾಡಿ ಹೆಸರನ್ನೂ ಮಾಡಿ ಕೀರ್ತಿವಂತರಾಗಿ ಬದುಕಿದರು. ನಿವೃತ್ತಿಯ ಕೊನೆಯಲ್ಲಿ ಅಕೌಂಟ್ ಅಡ್ವೈಸರ್ ಆಗಿಯೂ ಕೆಲಸ ಮಾಡಿ ಸೈ ಎನಿಸಿಕೊಂಡರು ಕೊನೆತನಕವೂ ಸ್ವಾಭಿಮಾನಿಯಾಗಿ ತೆಂಕಿಲ ಮನೆತನಕ್ಕೆ ನಿಜವಾದ ಗೌರವ ತಂದುಕೊಟ್ಟರು...

ಇದುವರೆಗೆ ನಮ್ಮ ಸಮುದಾಯದ ಒಳಗೆ ನಮ್ಮ ನಡುವೆ ಇಂತಹಾ ಶ್ರೇಷ್ಠ ವ್ಯಕ್ತಿ ಒಬ್ಬರು ಇದ್ದರೆನ್ನುವುದೇ ಸಂತಸದ ಸಂಗತಿ. ಇಂದು ಬೇಸರದ ಸಂಗತಿ.

***ದಿ| ಟಿ. ರಾಮಕೃಷ್ಣಯ್ಯ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.***

**– ಸಾಯಿನಾರಾಯಣ ಕಲ್ಮಡ್ಕ**

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

Sri Hari Adyapady
Proprietor

Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works




# ಯು (ಉ)ಗಾದಿ

– ಶ್ರೀ ಎಂ. ಆರ್. ವೆಂಕಟರಾಮಯ್ಯ ಮೊಬೈಲ್ : 7019869811

'ಯುಗಾದಿ', 'ಉಗಾದಿ' ಎಂದೆಲ್ಲಾ ಕರೆಯಲ್ಪಡುವ ಈ ಹಬ್ಬಕ್ಕೆ ಓದುಗರೆಲ್ಲರಿಗೂ ಹಾರ್ದಿಕ ಶುಭಾಶಯಗಳು ಹಾಗೂ ಆದರದ ಸ್ವಾಗತ. 'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' ಎಂದಿರುವ ಕನ್ನಡದ ಪ್ರಖ್ಯಾತ ಕವಿ ದ. ರಾ. ಬೇಂದ್ರೆಯವರ ಅಮೃತವಾಣಿಯಂತೆ ಈ 2022ರ ಹೊಸ ವರ್ಷ ಎಲ್ಲರ ಮನೆಯಲ್ಲಿ ಹೊಸ ಹರುಷವ ತರಲಿ ಎಂಬ ಹಾರೈಕೆಯೊಂದಿಗೆ ಪ್ರಸಕ್ತ ಲೇಖನ ಪ್ರಾರಂಭವಾಗುತ್ತಿದೆ.

ಯುಗಾದಿ ಎಂಬ ಸಂಸ್ಕೃತ ಶಬ್ದ. 'ಯುಗಸ್ಯ ಆದಿಃ' ಯುಗಾದಿ. ಇದರಲ್ಲಿ ಯುಗ ಮತ್ತು ಆದಿ ಎಂಬೆರಡು ಪದಗಳಿವೆ 'ಯುಗ' ಎಂಬುದು ಕಾಲಸೂಚಕ ಪದ. ಯುಗ ಎಂದರೆ ಕೃತ (ಸತ್ಯ), ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಿದ್ದು ಜೀವಿಯು ಸತ್ಯ ಧರ್ಮಮಯವಾದ ಬಾಳ್ವೆ ನಡೆಸಲಿ ಎಂಬ ಉದ್ದೇಶದಿಂದ ಬ್ರಹ್ಮನು ಪ್ರಾರಂಭಿಸಿದ ಸತ್ಯಯುಗದ ಆದಿಯೇ ಯುಗಾದಿ ಎಂದಿದ್ದಾರೆ ಶ್ರೀರಂಗ ಮಹಾಗುರುಗಳು. ಮತ್ತೆ ಕೆಲವು ಬರಹಗಾರರ ಪ್ರಕಾರ, ಶ್ರೀ ಕೃಷ್ಣನು ಈ ಜಗತ್ತನ್ನು ಬಿಟ್ಟ ದಿನವೇ ಇಂದು ನಾವಿರುವ ಕಲಿಯುಗ ಪ್ರಾರಂಭವಾಯಿತು. ಹೀಗಾಗಿ, ಈ ಯುಗದ ಆದಿ ಎಂದರೆ ಕಲಿಯುಗದ ಆದಿಯೇ ಎಂಬುದಾಗಿದೆ. ಈ ಅಭಿಪ್ರಾಯಗಳಲ್ಲಿ ಯಾವುದು ಸರಿ, ಯಾರದು ಸರಿಯಲ್ಲ ಎಂಬ ಚರ್ಚೆಯನ್ನು ಪಕ್ಕಕ್ಕಿಟ್ಟರೆ 'ಯುಗಾದಿ ಎಂದರೆ ಯುಗದ ಆದಿ' ಎಂಬುದಂತೂ ಸರ್ವರೂ ಒಪ್ಪತಕ್ಕ ವಿಷಯವಾಗಿದೆ.

ಯುಗಾದಿ ಹಬ್ಬವು ಪೌರಾಣಿಕ ಹಾಗೂ ಐತಿಹಾಸಿಕ ವಿಶೇಷತೆಗಳ ಪವಿತ್ರ ದಿನವಾಗಿದೆ. ಹೇಮಾದ್ರಿ ಪಂಡಿತರ 'ಚತುರ್ವರ್ಗ ಚಿಂತಾಮಣಿ' ಎಂಬ ಗ್ರಂಥದ ಅನುಸಾರ, ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯಮಿಯೇ ನೂತನ ವರ್ಷದ ಆರಂಭದ ದಿನ ಎಂಬ ಪರಿಗಣನೆಯಿದೆ. ಈ ದಿನದಂದು ಹಲವು ಪ್ರಥಮಗಳ ಸಂಗಮಗಳಿವೆ. ಅಂದರೆ ಎರಡು ಅಯನಗಳ ಪೈಕಿ ಪ್ರಥಮ ಅಯನ ಉತ್ತರಾಯಣದಲ್ಲೇ ಯುಗಾದಿ. ಆರು ಋತುಗಳಲ್ಲಿ ಪ್ರಥಮ ಸ್ಥಾನ ವಸಂತನಿಗೆ, 'ಋತೂನಾಂ ಕುಸುಮಾ ಕರಂ' ಎಂದು ಗೀತಾಚಾರ್ಯರು ಹೇಳಿರುವಂತೆ ಋತುರಾಜ ವಸಂತದ ಶುಭಾಗಮನವೇ ಯುಗಾದಿ. ತಿಂಗಳಲ್ಲಿ ಬರುವ 15 ತಿಥಿಗಳ ಪೈಕಿ ಮೊದಲ ದಿನವಾದ ಪಾಡ್ಯಮಿಯಂದೇ ಉಗಾದಿ ತಿಂಗಳಲ್ಲಿ ಬರುವ ಎರಡು ಪಕ್ಷಗಳ ಪೈಕಿ ಪ್ರಥಮ ಪಕ್ಷ ಶುಕ್ಲಪಕ್ಷ. ದ್ವಾದಶ ರಾಶಿಗಳ ಪೈಕಿ ಮೊದಲನೆಯದು ಮೇಷ ರಾಶಿಯಾಗಿದ್ದು ಈ ಪ್ರಥಮಗಳ ಸಂಗಮದಂದೇ ಯುಗಾದಿ ಹಬ್ಬದ ದಿನವಾಗಿದೆ. ಪ್ರಸಕ್ತ 2022ರ ವರ್ಷದ 2–4–2022ನೇ ಶನಿವಾರದಂದು ಶ್ರೀ ಶುಭಕೃತ್ ಸಂವತ್ಸರದ ಚಾಂದ್ರಮಾನ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ.

ದಕ್ಷಿಣ ಭಾರತವನ್ನು ಆಳಿದ ಶಾಲಿವಾಹನನು ಚೈತ್ರ ಶುದ್ಧ ಪಾಡ್ಯಮಿಯಂದು ಸಿಂಹಾಸನಾರೂಢನಾದನೆಂದೂ ಅಂದಿನಿಂದ ಶಾಲಿವಾಹನ ಶಕೆ ಆರಂಭವಾಯಿತೆಂದು ಇತಿಹಾಸ ತಿಳಿಸಿದೆ. ವರ್ಷಾರಂಭ ಚೈತ್ರ ಮಾಸದ ಪಾಡ್ಯಮಿಯಿಂದಲೇ ಎಂದು ವರಾಹಮಿಹಿರಾಚಾರ್ಯರು ತಿಳಿಸಿದ್ದಾರೆ. ಈ ಯುಗಾದಿಯನ್ನೂ ಚಾಂದ್ರಮಾನ ಮತ್ತು ಸೌರಮಾನ ಎಂಬ ಎರಡು ವಿಭಿನ್ನ ದಿನಗಳಂದು ಆಚರಿಸುವ ರೂಢಿಯಿದೆ. ಈ ಎರಡಕ್ಕೂ ಅನುಕ್ರಮವಾಗಿ ಚಂದ್ರ ಮತ್ತು ಸೂರ್ಯರ ಚಲನೆಯೇ ಪರಿಗಣನೆಗೆ ಆಧಾರ. ಚಂದ್ರ ಗ್ರಹದ ಚಲನೆ ಆಧರಿಸಿ ಕಾಲ ಲೆಕ್ಕಿಸುವುದನ್ನು ಚಾಂದ್ರಮಾನ ಎಂದೂ ಸೂರ್ಯನ ಚಲನೆ ಆಧರಿಸಿ ಲೆಕ್ಕಿಸುವುದನ್ನು ಸೌರಮಾನವೆಂದೂ ಹೆಸರಿಸಲಾಗಿದೆ. ಈ ಚಾಂದ್ರಮಾನ, ಸೌರಮಾನ ಯುಗಾದಿಗಳ ನಡುವೆ ಸಾಮಾನ್ಯವಾಗಿ 15 ದಿನಗಳ ಅಂತರವಿರುತ್ತದೆ.

ಹೇಮಂತ ಹಾಗೂ ಶಿಶಿರ ಋತುಗಳಲ್ಲಿ ತಂಪಾಗಿದ್ದ ವಾತಾವರಣ, ವಸಂತ ಋತುವಿನ ಆಗಮನದೊಂದಿಗೆ ಉಷ್ಣತೆ ಹೆಚ್ಚುತ್ತಾ ಮುಂದುವರಿಯುತ್ತದೆ. ಪ್ರಕೃತಿಯಲ್ಲಿನ ಗಿಡ ಮರಗಳಲ್ಲಿ ಹಳೆಯ ಎಲೆಗಳು ಉದುರಿ, ಹೊಸ ಚಿಗುರು ಮೂಡಿ ನವಚೈತನ್ಯ ತರುವ ಕಾಲ ಈ ಋತುವಿನದು. ಈ ಮುಂಚೆ ಗಿಡ ಮರಗಳಲ್ಲಿದ್ದ ಹೆಚ್ಚಿನ ಸಂಖ್ಯೆಯ ಎಲೆಗಳು ಹಣ್ಣಾಗಿ ಮರದಿಂದ ನೆಲಕ್ಕೆ ಉದುರಿ ಬೋಳಾಗಿ ನಿಂತ ಗಿಡ ಮರಗಳಿಗೆ ಈ ವಸಂತ ಜೀವ ಕಳೆ ತುಂಬಿ, 'ಮರವೆಂದರೆ ಹೀಗಿರಬೇಕು, ಹಸಿರು ಎಲೆಗಳು, ಹೂವು, ಹೀಚು ತುಂಬಿರಬೇಕು, ಬಿಸಿಲಿನಿಂದ ಬಳಲಿದ ದಾರಿಹೋಕರಿಗೆ ತಂಪಾದ ನೆರಳನೀಯಬೇಕು, ಕಾಯಿ ಹಣ್ಣು ಉದುರಿಸಿ ಅವರ ಹೊಟ್ಟೆ ತುಂಬಿಸಬೇಕು' ಎಂಬುದು ಜನರ ನಿರೀಕ್ಷೆ. ಈ ದಿನದಿಂದ ಹಳೆಯ ರಾಗ, ದ್ವೇಷ, ಕಷ್ಟ, ವ್ಯಸನಗಳನ್ನೆಲ್ಲಾ ಮರೆತು, ಹೊಸ ಹುರುಪಿನಿಂದ ನಮ್ಮ ಗುರಿ ಸಾಧನೆಯೆಡೆಗೆ ಹೆಜ್ಜೆ ಇಡಬೇಕೆಂಬ ಸಂಕೇತ ಈ ನಿಸರ್ಗದಲ್ಲಿನ ಬದಲಾವಣೆ. ಜೊತೆಗೆ, ನಿಸರ್ಗದಲ್ಲಿ ಹೇಗೆ ಬಿಸಿಲು, ಸೆಕೆ, ಚಳಿ, ಗಾಳಿ, ಮಳೆ ಮೊದಲಾದವು ಸ್ಥಿರವಾಗಿರದೆ, ಒಂದಾದ ನಂತರ ಮತ್ತೊಂದು ಬಂದುಹೋಗುತ್ತಲೇ ಇರುವುದರಿಂದ ಇವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡದಿರುವ ಪಾಠವನ್ನೂ ಪ್ರಕೃತಿಯಿಂದ ನಾವು ಕಲಿಯಬೇಕಾಗಿದೆ.

**ಯುಗಾದಿ ಹಬ್ಬದ ದಿನದ ಆಚರಣೆ :** ಪ್ರಾತಃಕಾಲ ಬೇಗನೆ ಎದ್ದು ಮನೆಯ ಒಳಗೆ ಹೊರಗಿನ ಜಾಗಗಳನ್ನು ಶುಚಿಗೊಳಿಸಿ, ಸಾರಿಸಿ, ಬಣ್ಣ ಬಣ್ಣದ ರಂಗವಲ್ಲಿಗಳನ್ನಿಡುವಿಕೆ, ಮನೆಯ ಬಾಗಿಲನ್ನು ಮಾವಿನ ಚಿಗುರೆಲೆಗಳ ತೋರಣದಿಂದ ಅಲಂಕರಿಸುವಿಕೆ, ತೈಲಾಭ್ಯಂಗನ, ದೇವತಾರ್ಚನೆ, ಪಂಚಾಂಗ ಪೂಜೆ, ನೂತನ ವಸ್ತ್ರಧಾರಣೆ, ಗುರು ಹಿರಿಯರಿಗೆ ಪಾದಾಭಿವಂದನೆ, ಅವರಿಂದ ಆಶೀರ್ವಾದ ಸ್ವೀಕಾರ, ನಂತರ "ಶತಾಯುರ್ವಜ್ರದೇಹಾಯ ಸರ್ವ ಸಂಪತ್ಕರಾಯ ಚ। ಸರ್ವಾರಿಷ್ಟವಿನಾಶಾಯ ನಿಂಬಕಂ ದಲಭಕ್ಷಣಮ್" ನನ್ನ ದೇಹವು ವಜ್ರದಂತೆ ನೂರು ವರ್ಷಕ್ಕೂ ಅಧಿಕ ಅವಧಿಯವರೆಗೆ ಹೆಚ್ಚು ಶಕ್ತಿಯುತವಾಗಲಿ, ಸರ್ವ ಸಂಪತ್ತುಗಳನ್ನೂ ನನಗೆ ದಯಪಾಲಿಸಿ ಎಲ್ಲಾ ಅನಿಷ್ಟಗಳನ್ನೂ ನಾಶಗೊಳಿಸು ಎಂಬ ಶ್ಲೋಕವನ್ನು ಪಠಿಸುತ್ತಾ ದೇವರ ಮುಂದೆ ನಿವೇದಿಸಿ ಇಟ್ಟಿದ್ದ ಬೇವಿನ ಚಿಗುರು ಬೆಲ್ಲದ ಸೇವನೆ, ದೇವಾಲಯಗಳಿಗೆ ಭೇಟಿ ನೀಡಿ ಬಂಧು ಮಿತ್ರರೆಲ್ಲರೊಂದಿಗೆ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿಯೂ ನಮ್ಮಲ್ಲಿದೆ.

**ಬೇವು ಬೆಲ್ಲದ ಸೇವನೆಯ ಅರ್ಥ :** ಮನುಷ್ಯನ ಜೀವನವೆಂಬುದು ಸಿಹಿ ಕಹಿಗಳ ಮಿಶ್ರಣ. ಇಲ್ಲಿ ಆಗಾಗ್ಗೆ ಬಂದು ಹೋಗುವ ಒಳಿತು, ಕೆಡುಕು, ಸಂತಸ, ದುಃಖ, ನೋವು, ನಲಿವು, ಆಶೆ, ನಿರಾಶೆ ಮೊದಲಾದ ಏರಿಳಿತಗಳನ್ನು ಸಮಚಿತ್ತದಿಂದ ಸ್ವೀಕರಿಸಿ ನಿಭಾಯಿಸುತ್ತಾ ಮುನ್ನಡೆಯುವುದನ್ನು ಕಲಿಯಬೇಕೆಂಬ ಸಂದೇಶ ಈ ಬೇವು ಬೆಲ್ಲಗಳು ನಮಗೆ ನೀಡುತ್ತವೆ. ಇಂದು ಬೇವು ಬೆಲ್ಲವೇ ಏಕೆ ಸೇವನೆ ಎಂದರೆ ಬೇವು ಕಹಿಯಾದರೂ ಆರೋಗ್ಯ ದೃಷ್ಟಿಯಿಂದ ಒಳಿತು. ಇದು ಹಲವು ಔಷಧಿಯ ಗುಣಗಳನ್ನು ಹೊಂದಿರುತ್ತದೆ. ಬೆಲ್ಲವು ಕಬ್ಬಿಣದ ಅಂಶದ ಕೊರತೆ ನೀಗಿಸಲು, ರಕ್ತದಲ್ಲಿ ಹಿಮೋಗ್ಲೋಬಿನ್ ವೃದ್ಧಿಸಲು ಸಹಾಯಕಾರಿ.


**ಪಂಚಾಂಗ ಪಠಣ, ಶ್ರವಣ :** ಯುಗಾದಿಯ ಸಂಜೆ ಮನೆಯಲ್ಲಿ ದೀಪ ಹಚ್ಚಿದ ನಂತರ, ಪಂಚಾಂಗ ಪಠಣ, ಶ್ರವಣ ಕಾರ್ಯಕ್ರಮ ರೂಢಿಯಲ್ಲಿರುತ್ತದೆ. ಪಂಚ + ಅಂಗ = ಪಂಚಾಂಗ. ಅಂದರೆ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಐದು ಅಂಗಗಳನ್ನೊಳಗೊಂಡಿರುವುದೇ ಪಂಚಾಂಗ. ಇದರಿಂದ ನಮಗೇನು ಪ್ರಯೋಜನ ಎಂದರೆ ಗ್ರಹಗಳ ಚಲನೆ, ಪ್ರತಿ ಮಾಸ ಫಲ, ರಾಶಿ ಫಲ, ದೇಶದಲ್ಲಿ ಆಗಬಹುದಾದ ಗಾಳಿ, ಮಳೆ, ಬೆಳೆ, ಹಬ್ಬ, ಹರಿದಿನಗಳ ಆಚರಣೆಯ ದಿನ ಮತ್ತೆ ಕಾಲ, ಗ್ರಹಣಗಳ ವಿಚಾರ, ಧಾರ್ಮಿಕಕ್ರಿಯೆಗಳ ಬಗ್ಗೆ ವಿವರಣೆ ಇತ್ಯಾದಿ ಉಪಯುಕ್ತ ಮಾಹಿತಿಗಳು ನಮಗೆ ಲಭ್ಯವಾಗುತ್ತವೆ.

ಯುಗಾದಿಯ ಮಾರನೆಯ ದಿನವೇ ವರ್ಷದ ತೊಡಕು. ಇಡೀ ವರ್ಷದ ತೊಡಕುಗಳೆಲ್ಲಾ ನಿವಾರಣೆಯಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಸತ್ಕಾರ್ಯದಲ್ಲಿ ತೊಡಗುವ ವಿಶೇಷ ದಿನವಿದು. ಇಂದಿನ ಸಂಜೆ ಆಯುರ್‌ವೃದ್ಧಿ, ಶ್ರೇಯಸ್ಕರವೆನಿಸುವ ಬಿದಿಗೆ ಚಂದ್ರನ ದರ್ಶನ ಮತ್ತೊಂದು ಅನಿವಾರ್ಯ ಕಾರ್ಯಕ್ರಮ. ದಕ್ಷಿಣ ಭಾರತದ ಪ್ರಾಂತ್ಯಗಳಾದ ಕರ್ನಾಟಕ, ಚೆನ್ನೈ, ಆಂಧ್ರ, ತೆಲಂಗಾಣ, ಕೇರಳ, ಮೊದಲಾದ ರಾಜ್ಯಗಳಲ್ಲಿ ಚೈತ್ರ ಮಾಸದ ಪಾಡ್ಯಮಿಯ ದಿನವೇ ಯುಗಾದಿ. ಉಗಾದಿ ಎಂಬ ಹೆಸರುಗಳಲ್ಲಿ ಹಬ್ಬವನ್ನು ಆಚರಿಸಿದರೆ, ಮಹಾರಾಷ್ಟ್ರದಲ್ಲಿ ಇದನ್ನು 'ಗುಡಿಪಡವ' ಹೀಗೆ ಭಾರತದ ಇತರ ರಾಜ್ಯಗಳಲ್ಲೂ ವಿವಿಧ ಹೆಸರುಗಳಲ್ಲಿ, ವಿದೇಶಗಳಾದ ಮೊರೀಶಿಯಸ್, ಬಾಲಿ, ಇಂಡೋನೀಷಿಯ ಇನ್ನಿತರ ದೇಶಗಳಲ್ಲೂ ಯುಗಾದಿಯನ್ನು ವಿಭಿನ್ನ ಹೆಸರು ರೀತಿಗಳಲ್ಲಿ ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತಿದೆ.

"ಕಾಲೇ ವರ್ಷತು ಪರ್ಜನ್ಯಃ" ಎಂದು ಮುಂದುವರಿಯುವ ಶ್ಲೋಕದಂತೆ ಸಕಾಲದಲ್ಲಿ ಸುವೃಷ್ಟಿಯಾಗಲಿ. ಸಸ್ಯ ಸಮೃದ್ಧಿಯಿಂದ ಹೇರಳ ಆಹಾರ ಉತ್ಪನ್ನವಾಗಲಿ. ದೇಶದಲ್ಲಿ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸತ್ಪುರುಷರು ನಿರ್ಭಯವಾಗಿರಲಿ. ಎಲ್ಲರೂ ಸುಖಿಗಳಾಗಿರಲಿ. ರೋಗರುಜಿನಗಳಿಲ್ಲದೆ ಎಲ್ಲರಿಗೂ ಮಂಗಳವಾಗಲಿ. ●



## ಮರಳಿ ಬಂದಿತು ... ಯುಗಾದಿ ...



ವರುಷ ವರುಷದಂತೆ ಮರಳಿ ಬಂದಿತು ಯುಗಾದಿ ಹಬ್ಬ।
ತರಲಿ ಶುಭಕೃತ್ ಸಂವತ್ಸರ ದಿನ ದಿನವೂ ನವ ಹರುಷದ ಹಬ್ಬ।
ಹೊಸೆಯುತಲಿ ಮನಸ್ಸುಗಳ ಪ್ರೀತಿಯ ಬೆಸುಗೆಯನು ಹಾಕುತಲಿ।
ನೂತನ ವರುಷಕೆ ನಲ್ಮೆಯ ಶುಭಾಶಯವನು ಕೋರುತಲಿ।


ಯುಗ ಯುಗಾದಿಯು ಬರಲು ನಗು ನಗುತಾ ಸ್ವಾಗತಿಸೋಣ।
ಹೊಸ ಸಂವತ್ಸರದಲಿ ಸುಖ ಸಂತಸದ ಹರ್ಷಧಾರೆ ಹರಿಸೋಣ।
ಬೇವಿನ ಕಹಿಯ ಭಾವವನ್ನು ಮನಸ್ಸು ಹೃದಯದಿಂದ ತೊಲಗಿಸೋಣ।
ಬೆಲ್ಲದ ಸವಿಯ ಹೃದಯ ಮನಸ್ಸಲ್ಲಿ ಸದಾ ಉಳಿಸೋಣ॥

ಪ್ರಕೃತಿಯು ತನ್ನ ಮೈಕೊಡವಿ ಮರುಜೀವ ಪಡೆದಿದೆ।
ಹಣ್ಣೆಲೆ ಉದುರಿ ಮರದಿ ಹೊಸ ಚಿಗುರೊಡೆದು ಬಂದಿದೆ।
ಚೈತ್ರದ ಚೆಲುವು ನೋಡಿ ಕೋಗಿಲೆ ಸವಿಗಾನ ಹಾಡುತಿದೆ।
ಹೂವರಳಿದ ಕಂಪಿಗೆ ದುಂಬಿಯು ನವಚೇತನವ ಪಡೆದಿದೆ॥

ಮನೆಯ ಮುಂದೆ ಮಾವಿನ ತೋರಣ ಬಣ್ಣದ ಚಿತ್ತಾರದ ಚೆಲುವು
ನೊಂದ ಹೃದಯಗಳಲ್ಲಿ ಪುಟಿದೇಳಲಿ ಸ್ಫೂರ್ತಿಯ ಗೆಲುವು।
ಏನೇ ಬರಲಿ ಸಮಚಿತ್ತ ಆತ್ಮಬಲ ಮನೋಭಾವವಿರಲಿ।
ಗುರು–ಹಿರಿಯರ ದೈವ ದೇವರುಗಳ ಆಶೀರ್ವಾದ ನಮ್ಮೊಂದಿಗಿರಲಿ॥

– ಶ್ರೀಮತಿ ಮಂಜುಳಾ ಮುರಳೀಧರ ರಾವ್ ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕೈೂಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241



PRAMOD
AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Prop. : P. Srikanth Rao
Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4



*(ಕಳೆದ ಸಂಚಿಕೆಯಿಂದ ಮುಂದುವರಿದುದು)*

# ನದಿಗಳು - ಸ್ನಾನ - ಮಾಘಮಾಸದ ಪಾವಿತ್ರ್ಯತೆ

**ಸಿಂಧು :** ಕೈಲಾಸ ಪರ್ವತವೆ ಈ ನದಿಯ ಉಗಮಸ್ಥಾನ ಎಂದು ಹೇಳುತ್ತಾರೆ. ಸಿಂಧೂ ನದಿಯಿಂದಲೆ 'ಹಿಂದೂ' ಎಂಬ ಹೆಸರು ಬಂದಿತೆಂದು ತಿಳಿಯುತ್ತದೆ. ಹರಪ್ಪ, ಮೊಹೆಂಜೊದಾರೋ ಪ್ರಾಚೀನ ಸಂಸ್ಕೃತಿಯು ಬೆಳೆದಿದ್ದು, ಸಿಂಧೂ ನದಿ ಕಣಿವೆಯಲ್ಲಿ ಎಂದು ತಿಳಿಯುತ್ತದೆ. ಪಂಜಾಬಿನ ಅಟಕ್ ಬಳಿಯಲ್ಲಿ ಬಯಲನ್ನು ಸೇರುತ್ತಾಳೆ. ಇಲ್ಲಿ ಕಾಬೂಲ್ ನದಿಯು ಸಿಂಧುವನ್ನು ಸೇರುತ್ತಾಳೆ. ನಂತರ ಪಂಚನದಿಗಳು ಸೇರುತ್ತವೆ. ಈ ನದಿಯ ಪ್ರಮಾಣ ವಿಸ್ತಾರವಾಗುತ್ತದೆ. ಕೊನೆಯಲ್ಲಿ ಕರಾಚಿಯ ಸಮೀಪ ಪಶ್ಚಿಮ ಸಮುದ್ರವನ್ನು ಸೇರುತ್ತಾಳೆ. ಉಗಮಸ್ಥಳದಿಂದ ಸುಮಾರು 2000 ಮೈಲಿಗಳು ಹರಿಯುತ್ತಾಳೆ. ಪಂಜಾಬ್ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ಈ ನದಿಯೆ ಜೀವನಾಧಾರ.

**ಕಾವೇರಿ :** ಮಡಿಕೇರಿಯ ಭಾಗಮಂಡಲದಲ್ಲಿ ಕಾವೇರಿಯ ಉಗಮಸ್ಥಾನ. ಇದಕ್ಕೆ ಲೋಪಾಮುದ್ರ (ಅಗಸ್ತ್ಯರ ಪತ್ನಿ) ಎಂದು ಕರೆಯುತ್ತಾರೆ. ದಕ್ಷಿಣದ ಗಂಗೆ ಎಂಬ ಪ್ರಸಿದ್ಧಿ. ತುಲಾ ಮಾಸದ ಸಂಕ್ರಮಣದಂದು ಕಾವೇರಿ ಉದ್ಭವವಾಗುತ್ತದೆ. ಈ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಕಾವೇರಿಯು ಕರ್ನಾಟಕ ಮತ್ತು ತಮಿಳುನಾಡಿನಲ್ಲಿಯೂ ಹರಿಯುತ್ತಾಳೆ. ಕಾವೇರಿಯು ಶ್ರೀರಂಗಪಟ್ಟಣವನ್ನು ದ್ವೀಪವನ್ನಾಗಿಸಿದೆ. ಶ್ರೀರಂಗಪಟ್ಟಣದ ರಂಗನಾಥ, ಶಿವನಸಮುದ್ರದಲ್ಲಿರುವ ರಂಗನಾಥ ಮತ್ತು ತಮಿಳುನಾಡಿನ ಶ್ರೀರಂಗದಲ್ಲಿರುವ ರಂಗನಾಥ ಕ್ರಮವಾಗಿ ಆದಿರಂಗ, ಮಧ್ಯರಂಗ ಮತ್ತು ಅಂತ್ಯರಂಗಗಳನ್ನು ಸುತ್ತುವರಿದು ದ್ವೀಪವನ್ನಾಗಿಸಿದೆ.

ಇತರ ನದಿಗಳು ಬಹಳ ಪ್ರಸಿದ್ಧಿಯಾಗಿದೆ. ನೇಪಾಳದ ಹತ್ತಿರವಿರುವ ಗಂಡಕಿ ನದಿ. ಇಲ್ಲಿ ಸಾಲಿಗ್ರಾಮಗಳು ದೊರೆಯುತ್ತದೆ. ಬ್ರಹ್ಮಪುತ್ರಾನದಿ – ಪರಶುರಾಮನು ತನ್ನ ಮಾತೃಹತ್ಯೆಯ ದೋಷ ಪರಿಹಾರಕ್ಕಾಗಿ ಈ ಪುಣ್ಯ ನದಿಯಲ್ಲಿ ಸ್ನಾನ ಮಾಡಿ ತನ್ನ ಮಾತೃಹತ್ಯಾ ದೋಷವನ್ನು ಪರಿಹಾರ ಮಾಡಿಕೊಂಡ. ಬದರಿ ಕ್ಷೇತ್ರದಲ್ಲಿ, ಅಲಕನಂದ. ಶುಭ ಸಮಾರಂಭಗಳಾದ ವಿವಾಹ ಕಾಲದಲ್ಲಿ 'ಮಹಾ ಸಂಕಲ್ಪ'ವನ್ನು ಹೇಳುತ್ತಾರೆ. ಕೇಳಲು ಬಹಳ ಚೆನ್ನಾಗಿರುತ್ತದೆ. ಈ ಸಂಕಲ್ಪದಲ್ಲಿ, ಇತರ ವಿವರಣೆಗಳ ಜೊತೆಗೆ, ನದಿಗಳ ವಿಷಯವು ಬರುತ್ತದೆ. (ಭಾಗಿರಥೀ ಭೀಮರಥೀ ಸರಸ್ವತೀ ಗೌತಮೀ ನರ್ಮದಾ ಯಮುನಾ ಕೃಷ್ಣವೇಣೀ ವೇಣುಕಾ... ಪುಣ್ಯದಾದ್ಯನೇಕ ಮಹಾನದೀವಿರಾಜಿತೇ). ಈಗಿನ ಪರಿಸ್ಥಿತಿಯಲ್ಲಿ, ನದಿಗಳಲ್ಲಿ ಸ್ನಾನ ಮಾಡಲು ಹಿಂಜರಿಕೆಯಾಗುತ್ತದೆ. ಕಾರಣ, ಮಾನವನಿಂದ ಮಲಿನ ಆಗುತ್ತಿದೆ. ಈಗ ಎಲ್ಲರು ಎಚ್ಚೆತ್ತು, ನದಿಗಳ ಶುದ್ಧೀಕರಣ ನಡೆಯುತ್ತಿರುವುದು ಬಹಳ ಸ್ವಾಗತಾರ್ಹ. ನೀರು ಎಷ್ಟು ಮುಖ್ಯವಾದುದು ಎಂಬುದು ಈಗ ತಿಳಿಯುತ್ತಿದೆ. ಅದರಿಂದಲೇ ಮಳೆನೀರಿನ ಕೊಯಿಲು ಆರಂಭವಾಗಿದೆ.

ಮಾಘಮಾಸ (01–02–2022 ರಿಂದ 02–03–2022) – ಈ ಮಾಸವು ಬಹಳ ಪವಿತ್ರವಾದುದು. ಮಾಘ ಮಾಸದಲ್ಲಿ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ. ಮಾಘಮಾಸದಲ್ಲಿ, ನದಿಗಳಲ್ಲಿ ಸ್ನಾನ ಮಾಡುತ್ತಾರೆ. ಇದಕ್ಕಾಗಿಯೆ ಜನರು ಹಾತೊರೆಯುತ್ತಿರುತ್ತಾರೆ. ಮಾಘ ಭಾನುವಾರಗಳಲ್ಲಿ 'ಮಾಘ ಸ್ನಾನ' ಬಹಳ ಪವಿತ್ರವಾದುದು. ನದಿಗಳ ಸಂಗಮಗಳಲ್ಲಿ ಸ್ನಾನ ಮಾಡುತ್ತಾರೆ. ಮಾಘ ಮಾಸದ ಪಾವಿತ್ರ್ಯತೆ ಮತ್ತು ಅದರ ವಿಷಯವಾಗಿ ಮಾಘಮಾಸದ ಪುರಾಣವೇ ಇದೆ. ದೇವತಾ ಸನ್ನಿಧಿಗಳಲ್ಲಿರುವ ನದಿಗಳಲ್ಲಿ ಮತ್ತು ಸಂಗಮ ಸ್ಥಳಗಳಲ್ಲಿ ಸೂರ್ಯೋದಯಕ್ಕೆ ಮುಂಚೆ ಸ್ನಾನ ಬಹಳ ಪವಿತ್ರ ಮತ್ತು ಪುಣ್ಯಕರವಾದುದು. ನದಿಗಳ ಸ್ನಾನಕಾಲದಲ್ಲಿ ಸಂಕಲ್ಪ ಹೇಳಿ, ತಿಳಿದವರು ಪ್ರಸಿದ್ಧವಾದ 'ಅಘಮರ್ಷಣ' ಸೂಕ್ತ ಹೇಳಿಕೊಂಡು ಸ್ನಾನಮಾಡಿ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು ಧನ್ಯರಾಗುತ್ತಾರೆ. ನದಿಗಳಲ್ಲಿ ಮಾಡುವ ಸ್ನಾನಕ್ಕೆ 'ಅವಗಾಹನ ಸ್ನಾನ' ಎನ್ನುತ್ತಾರೆ.

ವಿಶೇಷವಾಗಿ ಮಾಘ ಮಾಸದ ಭಾನುವಾರಗಳಂದು, ನಮಸ್ಕಾರಪ್ರಿಯನಾದ ಶ್ರೀ ಸೂರ್ಯನಾರಾಯಣನ ಪೂಜೆ ನಡೆಯುತ್ತದೆ. ಸೂರ್ಯ ಭಗವಾನನ ಧಾನ್ಯವಾದ ಗೋದಿಯಿರುವ ತಟ್ಟೆಯಲ್ಲಿ ಜಲವಿರುವ ಕಲಶವನ್ನಿಟ್ಟು ಸೂರ್ಯನನ್ನು ಮಂತ್ರಪುರಸ್ಸರವಾಗಿ ಆಹ್ವಾನಿಸಿ ಶಾಸ್ತ್ರೀಯವಾಗಿ ಪೂಜೆ ಸಲ್ಲಿಸುತ್ತಾರೆ. ಪೂಜಾದಿಗಳ ನಂತರ, ಸೂರ್ಯನಿಗೆ ಪ್ರಿಯವಾದ ಗೋದಿಯ ಪಾಯಸವನ್ನು ನೈವೇದ್ಯ ಮಾಡುತ್ತಾರೆ. ಹಾಗೆಯೇ, ಆದಿತ್ಯಹೃದಯ, ಸೌರಸೂಕ್ತ, ಅರುಣಪ್ರಶ್ನ ಮತ್ತು ಇತರ ಸೂರ್ಯ ಮಂತ್ರಗಳಿಂದ ನಮಸ್ಕಾರ ಮಾಡುತ್ತಾರೆ. ಅರುಣಪ್ರಶ್ನದಲ್ಲಿಯೆ 130 ನಮಸ್ಕಾರಗಳು ಬರುತ್ತದೆ. ಎಲ್ಲ ಸೂರ್ಯಮಂತ್ರಗಳ ಸಹಿತ ನಮಸ್ಕಾರಗಳು 150ಕ್ಕೂ ಹೆಚ್ಚಾಗುತ್ತದೆ. ಈ ನಮಸ್ಕಾರಗಳಿಂದ, ವಿವಿಧ ರೀತಿಯ ಪ್ರಯೋಜನಗಳಿವೆ. ಕಣ್ಣು, ಹೃದಯ ಮತ್ತು ದೇಹಕ್ಕೆ ಸಂಬಂಧಪಟ್ಟ ಅನೇಕ ಕಾಯಿಲೆಗಳು ಗುಣವಾಗುತ್ತದೆ. ಈ ಅರುಣ ಮಂತ್ರದಲ್ಲಿ ಅನೇಕ ರೀತಿಯ ವೈಜ್ಞಾನಿಕ ವಿಷಯಗಳನ್ನು ಕಾಣಬಹುದು. ಕಠಿಣವಾದ ಪ್ರಸವವೇದನೆಗಳು ಕಡಿಮೆಯಾಗಿ ಸುಸೂತ್ರ ಪ್ರಸವವಾಗುತ್ತದೆ. ಅದರಿಂದ ಮನೆಯಲ್ಲಿ ಇಂತಹ ಕಠಿಣ ಪ್ರಸಂಗಗಳಲ್ಲಿ ಅರುಣ ಪಾರಾಯಣ ಮಾಡುತ್ತಾರೆ. ಹಾಗೆಯೇ ಅರುಣ ಪಾರಾಯಣ ಮಾಡುವಾಗ 60–63ನೇ ಅನುವಾಕ್ಯವನ್ನು ಮನಸ್ಸಿನಲ್ಲಿಯೇ ಹೇಳುತ್ತೇವೆ. **(ಅಪಕ್ರಾಮತ ಗರ್ಭಿಣ್ಯ) ಅಶ್ತಯೋನಿಮಷ್ಟಪುತ್ರಾವ್... ಅಥ ಪುರುಷಸ್ಸಪುರುಷಃ (ಯಥಾಸ್ಥಾನಂ ಗರ್ಭಿಣ್ಯಃ).** ಈ ಮಂತ್ರದಿಂದ ಗರ್ಭಿಣಿಯಿದ್ದರೆ ಪ್ರಸವ ಅಥವಾ ಗರ್ಭ ಸ್ರಾವವಾಗಬಹುದು. ಹಾಗೆಯೇ ಅರುಣಪ್ರಶ್ನೆಯಲ್ಲಿ ಬರುವ ಮಂತ್ರ – **(ಪರ್ಜನ್ಯಾಯ ಪ್ರಗಾಯತ । ದಿವಸ್ಪುತ್ರಾಯ ಮೀಢುಷೇ । ಸ ನೋ ಯವಸಮಿಚ್ಛತು । ಇದಂ ವಚಃ ಪರ್ಜನ್ಯಾಯಸ್ವರಾಜೇ । ಹೃದೋ ಅಸ್ತ್ವನ್ತರಂ ತದ್ಯುಯೋತ । ಮಯೋಭೂರ್ವಾತೋ ವಿಶ್ವಕೃಷ್ಟಯಸ್ಸನ್ತ್ವಸ್ಮೇ । ಸುಪಿಪ್ಪಲಾ ಓಷಧೀರ್ದೇವಗೋಪಾಃ ॥ ಯೋ ಗರ್ಭಮೋಷಧೀನಾಮ್। ಗವಾಂ ಕೃಣೋತ್ಯರ್ವತಾಮ್ । ಪರ್ಜನ್ಯಃ ಪುರುಷೀಣಾಮ್ ।)** ಬರಗಾಲದಲ್ಲಿ, ಈ ಮಂತ್ರವನ್ನು ಸಂಕಲ್ಪ ಮತ್ತು ಭಕ್ತಿಪೂರ್ವಕವಾಗಿ ಜಪ ಮತ್ತು ಸಾಮೂಹಿಕ ಪಾರಾಯಣದಿಂದ ಮಳೆ ಬರುತ್ತದೆ.

ಶ್ರೀ ಬಿ. ಆರ್. ಶ್ರೀಕಂಠಯ್ಯ, ಬೆಂಗಳೂರು ✆ : **94494 57684**




ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
✆ : 9448043969
8861497325
**ಶಿವಗಿರಿ ಎಂಟರ್‌ಪ್ರೈಸಸ್**
**SHIVAGIRI ENTERPRISES**


ಪತ್ರಿಕೆಗೆ ಶುಭ ಬಯಸುವ–

ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

# ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯ ಇದರ ವಿಸ್ತೃತ ಕಟ್ಟಡದ ಮೂರನೇ ಅಂತಸ್ತಿನ ಉದ್ಘಾಟನೆ







ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯ ಇದರ ವಿಸ್ತೃತ ಕಟ್ಟಡದ ತೃತೀಯ ಅಂತಸ್ತಿನ ಉದ್ಘಾಟನಾ ಸಮಾರಂಭ ತಾರೀಕು 20–3–2022ನೇ ರವಿವಾರ ನಡೆಯಿತು. ಶ್ರೀ ಶಾರದಾ ಭಜನಾ ಮಂಡಳಿ, ಮಂಗಳೂರು ಮತ್ತು ಶಿವರಂಜಿನಿ ಕಲಾಕೇಂದ್ರ, ಬೊಕ್ಕಸ ಇವರ ಭಜನಾ ಸೇವೆಯ ಬಳಿಕ ದಾನಿಗಳ ನಾಮಫಲಕ ಅನಾವರಣ, ದೀಪ ಪ್ರಜ್ವಲನೆಯ ಬಳಿಕ ಸಭಾ ಕಾರ್ಯಕ್ರಮ ನಡೆಯಿತು. ಬೆಂಗಳೂರು ಅಖಿಲ ಭಾರತ ಸ್ಥಾನಿಕ ಸಭಾದ ಅಧ್ಯಕ್ಷರಾದ ಶ್ರೀ ರವೀಂದ್ರನಾಥ ಬೆಳ್ಳೆ, ದಾನಿಗಳಾದ ಶ್ರೀ ಸದಾಶಿವ ಎಂ. ರಾವ್, ಡಾ। ಅಶುತೋಷ್ ರಾವ್, ಮಲೇಷಿಯಾ ಮುಖ್ಯ ಅತಿಥಿಗಳಾಗಿದ್ದರು. ಶ್ರೀಮತಿ ಕುಸುಮ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಭುವನಾ ನಾಗರಾಜ್‌ರವರು ಪ್ರಾರ್ಥನೆ ಹಾಡಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸ್ವಾಗತಿಸಿ, ಪ್ರಸ್ತಾವನೆಗೈದರು. ಗಣ್ಯರು ಶುಭಹಾರೈಸಿ ಅಭಿನಂದಿಸಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ತಮ್ಮ ಹೆತ್ತವರಾದ ಶ್ರೀಮತಿ ಶೇಷಮ್ಮ ಮತ್ತು ಕೆಳಗಿನ ಮನೆ ಆನಂದ ರಾವ್ ಸ್ಮರಣಾರ್ಥ ಶಿವಸದನಕ್ಕೆ ರೂ. 5,00,000/– ನೀಡಿದ್ದು, ಭಾಷಣದಲ್ಲಿ ಅವರನ್ನು ನೆನಪಿಸಿ ಬಾವುಕರಾದರು ಮತ್ತು 'ಶಿವಸದನ' ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ನೀಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಉಪಾಧ್ಯಕ್ಷ ಡಾ। ಎ. ಪಿ. ಕೃಷ್ಣ ಧನ್ಯವಾದ ನೀಡಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಮಾಲಿನಿ ಬೆಳ್ಳೆ, ಶ್ರೀಮತಿ ಶೀತಲ್ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಸಭಾದ ಪದಾಧಿಕಾರಿಗಳು, ಸದಸ್ಯರು, ಹಿತೈಷಿಗಳು, ವಸತಿ ನಿಲಯದ ನಿವಾಸಿಗಳು ಉಪಸ್ಥಿತರಿದ್ದು ಸಹಕರಿಸಿದರು.

(ಚಿತ್ರಗಳು : ಶ್ರೀ ಚೇತನ್ ಶರ್ಮಾ)






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Sri Harsha Kumar Kedige, President, Shree Subrahmanya Sabha (R.), Kodialbail, Mangalore - 3
*Editor :* Sri M. S. Raghunath Rao, Darbe, Puttur
*Printed at :* Rajesh Power Press, Darbe - 574 202, Puttur, D. K.